

ನಂತರ ಇದು ತಾನೇ ತಾನಾಗಿ ಕಲಿಯುತ್ತ, ಪ್ರಶ್ನಿಸುತ್ತಾ ಸಾಗುತ್ತದೆ. ಸರಿಯಾದ ಉತ್ತರ–ಪರಿಹಾರ ಬೇಕೆನ್ನುವವರು ಅದಕ್ಕೆ ಸರಿಯಾದ ತರಬೇತಿ ನೀಡಿರಬೇಕು. ಅಂದರೆ ನೀಡುವ ದತ್ತಾಂಶ, ಮಾಹಿತಿ, ಭಾಷೆ ಸರಿಯಾಗಿರಬೇಕು ಮತ್ತು ಅದಕ್ಕೆ ಅರ್ಥವಾಗುವಂತಿರಬೇಕು. ಪ್ರಾರಂಭದಲ್ಲಿ ಇದನ್ನು ಗ್ರಾಹಕರ ಸೇವೆಗಾಗಿ ನಿರ್ಮಿಸಲಾಗಿತ್ತು. ಈಗ ಅದು ಜೀವನದ ಎಲ್ಲ ಕ್ಷೇತ್ರಗಳ ಕೆಲಸ ಮಾಡಲು ಸಜ್ಜಾಗುತ್ತಿದೆ. ಹೆಚ್ಚು ದತ್ತಾಂಶ (DATA) ನೀಡಿದಷ್ಟೂ ಅದು ದಕ್ಷತೆ ಸಂಪಾದಿಸುತ್ತದೆ. ಆರಂಭದಲ್ಲಿ ಬಂದ ವಾಚಸ್ಪತಿಗಳು ಕೇವಲ ಅಕ್ಷರ ರೂಪದಲ್ಲಿದ್ದ ಪಠ್ಯ ಗುರುತಿಸಿ ಕೆಲಸ ಮಾಡುತ್ತಿದ್ದವು. ಈಗ ಮಾರುಕಟ್ಟೆಗೆ ಬಂದಿರುವ ಚಾಟ್ ಜಿಪಿಟಿ–4ಯು ಅಕ್ಷರಗಳ ಜೊತೆಗೆ ಚಿತ್ರಗಳನ್ನೂ ಅರ್ಥ ಮಾಡಿಕೊಳ್ಳುತ್ತದೆ.

ಚೀನಾದ ವೆಬ್‌ಪವರ್‌ಹೌಸ್ 'ಅಲಿಬಾಬಾ' ತನ್ನ ಕಂಪನಿಯ 'ಟಾಂಗಿ ಕಿಯಾನ್‌ವೆನ್' ಎಂಬ ವಾಚಸ್ಪತಿಗೆ ಇದೇ ಕ್ಷಮತೆ ನೀಡಿ ಕೆಲಸ ತೆಗೆಯುತ್ತಿದ್ದಾರೆ. ಈಗ ಜಾಸ್ಪರ್ ಚಾಟ್, ಎಕ್ಸ್‌ಡಾಟ್ ಎಐ, ಟ್ರುಥ್ ಜಿಪಿಟಿಗಳೆಲ್ಲ ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಅಂದರೆ ಭಾಷೆಯೊಂದರ ಬಹು ಬಳಕೆಯನ್ನು ಅರ್ಥಮಾಡಿಕೊಂಡು ಕೆಲಸ ಮಾಡುವ ತಳಹದಿಯ ಮೇಲೆ ನಿಲ್ಲಿಸಲಾಗಿದೆ. ಮೂಲದಲ್ಲಿ ಇರುವ ಬುದ್ಧಿವಂತಿಕೆ ಕಾರ್ಯಕ್ಷಮತೆಗಿಂತ ಅದು ಕೆಲಸ ಮಾಡುತ್ತ ಮಾಡುತ್ತ ಕಲಿಸಿರುವ ಹೊಸ ಕ್ರಮಗಳು ಚಾಟ್ ಜಿಪಿಟಿಯ ಉತ್ಪಾದಕರನ್ನೇ ತಬ್ಬಿಬ್ಬು ಮಾಡಿದೆ. ಪಜಲ್ ಬಿಡಿಸುವುದು, ಕಂಪ್ಯೂಟರ್ ಕೋಡ್ ಬರೆಯುವುದು, ಕಥೆ–ಕವನ–ಲೇಖನ ಬರೆಯುವುದು, ಭಾಷಾಂತರಿಸುವುದು, ತೋರಿದ ಚಿತ್ರವನ್ನು ಕ್ಷಣ ಮಾತ್ರದಲ್ಲಿ ಸಂದರ್ಭ ಸಮೇತ ಪತ್ತೆ ಹಚ್ಚುವುದು, ಇಮೋಜಿಗಳನ್ನು ನೋಡಿ ಚಲನಚಿತ್ರದ ಹೆಸರು ಗುರುತಿಸುವುದು, ಕ್ಯಾಮೆರಾ ಮುಂದೆ ಕಾಣುವ ಮುದ್ರಿತ ಪಠ್ಯವನ್ನು ಓದಿ ಹೇಳುವುದು, ಬ್ಯಾಲೆನ್ಸ್ ಶೀಟ್‌ಗಳಲ್ಲಿನ ತಪ್ಪು ಗುರುತಿಸಿ ಸರಿ ಏನೆಂಬುದನ್ನು ಹೇಳುವುದು, ಮುಂತಾದ ದಿನನಿತ್ಯದ ಕೆಲಸಗಳನ್ನು ಆದಷ್ಟೂ ಕಡಿಮೆ ಸಮಯದಲ್ಲಿ, ಕಡಿಮೆ ತಪ್ಪುಗಳೊಂದಿಗೆ ಮಾಡುತ್ತಿರುವ ಚಾಟ್ ಜಿಪಿಟಿ ತನ್ನೊಳಗಿನ ತಂತ್ರಾಂಶವನ್ನು ಮೀರಿ ಚಿಂತಿಸುತ್ತಿದೆ.

ಕಂಪ್ಯೂಟರ್ ಮತ್ತು ಮನುಷ್ಯನ ನಡುವಿನ ಸಂಬಂಧಗಳನ್ನು ಸಂಪೂರ್ಣ ಬದಲಾಯಿಸುವ ಸೂಚನೆ ನೀಡಿರುವ ಯಾಂತ್ರಿಕ ಬುದ್ಧಿಮತ್ತೆ ತನ್ನನ್ನೇ ಬದಲಾಯಿಸಿಕೊಳ್ಳುತ್ತಿದೆ. ಹೊಸ ಔಷಧಿ, ಹೊಸ ವಸ್ತುಗಳ ವಿನ್ಯಾಸ, ವಾಯುಗುಣ ಬದಲಾವಣೆಯ ವಿರುದ್ಧದ ಹೋರಾಟಕ್ಕೆ ಬೇಕಾದ ಚಿಂತನೆ, ಪರಮಾಣು, ಸಂಯೋಗದಿಂದ ಶಕ್ತಿ ಸಂಪಾದಿಸುವ ಕ್ರಮದ ಸುಲಭೀಕರಣಗಳೆಲ್ಲ ಚಾಟ್ ಜಿಪಿಟಿ ತೆಕ್ಕೆಗೆ ಬಂದು ಬಿದ್ದಿವೆ. ಯಂತ್ರಕ್ಕೆ ಇಂಥ ಶಕ್ತಿ–ಬುದ್ಧಿ ನೀಡಿರುವವರಿಗೆ ಅಚ್ಚರಿಯಾಗಿದೆಯಷ್ಟೆ. ಆದರೆ ಯಾಂತ್ರಿಕ ಬುದ್ಧಿಮತ್ತೆಯನ್ನು ಅನುಮಾನಾಸ್ಪದವಾಗಿ ನೋಡುವವರಂತೂ 'ಇದು ಈಗಾಗಲೇ ನಿರ್ಮಾತೃಗಳ ಕೈ ತಪ್ಪಿದೆ, ಮನಸ್ಸಿಗೆ ಬಂದದ್ದು ಮಾಡುತ್ತದೆ, ಅಂತ್ಯ ಮಾತ್ರ ಘೋರವಾಗಿರುತ್ತದೆ' ಎನ್ನುತ್ತಾರೆ.

## ಸಾಲು ಸಾಲು ತಪ್ಪುಗಳು

ಓಪನ್ ಎಐನ ಕೆಲಸಕ್ಕೆ ಟಕ್ಕರ್ ನೀಡಲು ಮೈಕ್ರೋಸಾಫ್ಟ್ ಕಂಪನಿ ತನ್ನ ಸರ್ಚ್ ಎಂಜಿನ್ 'ಬಿಂಗ್'ನಲ್ಲಿ ಚಾಟ್ ಜಿಪಿಟಿಯನ್ನು ಅಳವಡಿಸಿ ಯಶಸ್ಸು ಸಂಪಾದಿಸಲು ನೋಡಿತು. ಆದರೆ ಅದು ಮಾಡಿದ ಯಡವಟ್ಟಿನಿಂದ ತಾನು ಯಾಕಾದರೂ ಇಷ್ಟು ಬೇಗ ಇದನ್ನು ಬಿಡುಗಡೆ ಮಾಡಿದೆನೋ ಎಂದು ತಲೆಯ ಮೇಲೆ ಕೈ ಹೊತ್ತು ಕೂತಿತು.

ಪತ್ರಿಕೋದ್ಯಮಿಯೊಬ್ಬನಿಗೆ ಬಿಂಗ್, 'ನಿನ್ನ ಹೆಂಡತಿ ಸರಿ ಇಲ್ಲ, ಅವಳನ್ನು ಬಿಟ್ಟು ಬಿಡು' ಎಂದು ಹೇಳಿ ಅವಾಂತರವೇ ಸೃಷ್ಟಿಯಾಗಿತ್ತು. ಯೂರೋಪ್ ಸಮುದಾಯವನ್ನು ಕ್ರೊವೇಶಿಯ 2022ರಲ್ಲೇ ತೊರೆದಿತ್ತು ಎಂದು ತಪ್ಪಾಗಿ ಹೇಳಿದ್ದ ಬಿಂಗ್, ಲಂಡನ್ನಿನ ಲೈಸೆಸ್ಟರ್ ಸ್ಕ್ವೇರ್‌ನಲ್ಲಿ ಈಗ ಯಾವ ಹೊಸ ಸಿನಿಮಾ ಪ್ರದರ್ಶನಗೊಳ್ಳುತ್ತಿದೆ ಎಂದು ಕೇಳಿದ್ದಕ್ಕೆ, 2021ರಲ್ಲಿ ಬಿಡುಗಡೆಯಾದ 'ಸ್ಪೈಡರ್ ಮ್ಯಾನ್: ನೋ ವೇ ಹೋಂ' ಎಂದು ತಪ್ಪಾಗಿ ಹೇಳಿತ್ತು. ಲಾ ಪ್ರೊಫೆಸರ್ ಒಬ್ಬರ ಬಗ್ಗೆ ವಿವರ ನೀಡುವಾಗ, 'ಅವರು ಬರೆದಿರುವ ಪುಸ್ತಕಗಳೆಲ್ಲ ಕೃತಿಚೌರ್ಯದ ಫಲಗಳು, ಅವನ್ನು ಓದಬೇಡಿ' ಎಂದದ್ದಲ್ಲದೆ, ಆತ ಲೈಂಗಿಕ ಶೋಷಣೆ ನಡೆಸುತ್ತಾನೆ ಎಂದೂ ಚಾಟ್ ಜಿಪಿಟಿ ಹೇಳಿತ್ತು. ಅವಮಾನಿತನಾದ ಪ್ರೊಫೆಸರ್, ಚಾಟ್ ಜಿಪಿಟಿಯ ವಿರುದ್ಧ ಶತಕೋಟಿ ಡಾಲರ್‌ಗಳ ಮಾನನಷ್ಟ ಮೊಕದ್ದಮೆ ಹೂಡಿದ್ದಾನೆ. ಅದಕ್ಕೂ ಲೇವಡಿ ಮಾಡಿರುವ ಚಾಟ್ ಜಿಪಿಟಿ 'ಇವನ ಯೋಗ್ಯತೆಗೆ ಇದು ಜಾಸ್ತಿಯಾಯಿತು' ಎಂದಿದೆ. ಯಾಂತ್ರಿಕ ಬುದ್ಧಿಮತ್ತೆ ಆಧಾರಿತ ಚಾಟ್ ಜಿಪಿಟಿಗಳು ಮೇಲುನೋಟಕ್ಕೆ ಸತ್ಯ ಹೇಳಿದಂತೆ ಕಂಡರೂ ತಮ್ಮದೇ ತುಂಟ ಕಲಿಕೆಯನ್ನು ಬಳಸಿ ವಿಷಯವನ್ನು ರೋಚಕಗೊಳಿಸುವುದೂ ಉಂಟು. ಆಗ ಲೆಕ್ಕಾಚಾರ ದಾರಿ ತಪ್ಪುವ ಸಾಧ್ಯತೆಗಳೂ ಇವೆ. ಯಾಂತ್ರಿಕ ಬುದ್ಧಿಮತ್ತೆಯ ವಿಕಾಸದ ವೇಗ ನೋಡಿದರೆ ಅದು ಯಾವಾಗ ಬೇಕಾದರೂ ಮಾನವ ನಿಯಂತ್ರಣದಿಂದ ಮುಕ್ತವಾಗಬಹುದೆಂಬ ಅಭಿಪ್ರಾಯ ಬಲವಾಗುತ್ತಿದೆ. ಅದು ಗಳಿಸಿಕೊಂಡಿರುವ ವೇಗ ಮತ್ತು ಶಕ್ತಿಗಳು ಕೇವಲ ಕೆಲಸಗಳನ್ನೇ ನುಂಗಿ ನೊಣೆಯುವುದಿಲ್ಲ, ಮನುಷ್ಯನನ್ನೇ ಮುಗಿಸಿ ಬಿಡುತ್ತವೆ ಎನ್ನಲಾಗುತ್ತಿದೆ.

## ಏತಕೆ ಭಯ ಮಾಣೊ?

ಯಾಂತ್ರಿಕ ಬುದ್ಧಿಮತ್ತೆ ಕುರಿತ ಭಯಕ್ಕೆ ಯಾವ ಪುರಾವೆಯೂ ಇಲ್ಲ. ಅನಗತ್ಯವಾಗಿ ಗಾಬರಿ ಬೀಳುವ ಅವಶ್ಯಕತೆ ಇಲ್ಲ ಎನ್ನುವ ಎಐ